ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸದನದ ಸಮಿತಿ ರಚಿಸಿದರೆ ಅದರಲ್ಲಿ ನಿಮ್ಮವರು ಇರುತ್ತಾರೆ, ಸದನದ ಸಮಿತಿ ಎಂದರೆ ನಮ್ಮವರೇ ಇರುವುದಿಲ್ಲ. ಸದನದ ಸಮಿತಿ ರಚಿಸಿದರೆ ಈ ಕಡೆಯವರು ಇರುತ್ತಾರೆ ಆ ಕೆಡೆಯವರು ಇರುತ್ತಾರೆ, ದಯವಿಟ್ಟು ವಿಷಯವನ್ನು ಡೈವರ್ಟ್ ಮಾಡಬೇಡಿ.

ಶ್ರೀ ಜೆ.ಹೆಚ್. ಪಟೇಲ್ : ಅತ್ಯಂತ ವಿನಯಪೂರ್ವಕವಾಗಿ ಹೇಳುತ್ತೇನೆ, ಸದನ ಸಮಿತಿಯ ಅವಶ್ಯಕತೆಯಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವಶ್ಯಕತೆ ಇಲ್ಲವೆಂದರೆ ನಾವು ಇಲ್ಲೇ ಕುಳಿತುಕೊಳ್ಳುವುದು ಸರಿ.

ಶ್ರೀ ಜೆ.ಹೆಚ್. ಪಟೇಲ್ : ಇದಕ್ಕೆ ನಾನು ಏನು ಮಾಡುವುದಕ್ಕಾಗುತ್ತದೆ ಸ್ವಾಮಿ? ನೆಲ ಹಿಡಿಯಬೇಡಿ, ಹಿಡಿಯಬೇಡಿ ಎಂದು ಸಾವಿರ ಸಲ ಹೇಳಾಯಿತು, ಮತ್ತೆ ನೆಲ ಹಿಡಿಯುತ್ತೇವೆಂದರೆ.....

ಶ್ರೀ ವಾಟಾಳ್ ನಾಗರಾಜ್: ನೀವು ಸದನ ಸಮಿತಿಯನ್ನು ರಚಿಸುವುದಿಲ್ಲವೆಂದರೆ, ನಮಗೆ ಧರಣಿ ಮಾಡದೆ ವಿಧಿಯಿಲ್ಲ.

(ಈ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರು ಹಾಗೂ ಸದಸ್ಯರೆಲ್ಲಾ ಸದನದ ಬಾವಿಯಲ್ಲಿ ಬಂದು ಧರಣಿ ಕುಳಿತರು)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳುತ್ತೇನೆ, ನಿಮ್ಮ ಕಾಲದಲ್ಲೇ ನೀವು ಇದಕ್ಕೆ ಹೋರಾಟ ಮಾಡಿದವರು, ಇನ್ನು ಮೂರು ದಿವಸವಾಗಲಿ, ಹಗಲು ರಾತ್ರಿಯಾಗಲಿ ನಾವು ಈ ಸ್ಥಳವನ್ನು ಬಿಟ್ಟು ಹೋಗುವುದಿಲ್ಲ. ಸದನದ ಸಮಿತಿಯನ್ನು ರಚಿಸಬೇಕು, ಈಗ ಏರಿಸಿರುವ ಬಸ್ ಪ್ರಯಾಣ ದರವನ್ನು ವಾಪಸ್ ತೆಗೆದುಕೊಳ್ಳಬೇಕು, ಚರ್ಚೆಯಾಗಿ, ಅನಿವಾರ್ಯವಾದರೆ ಆಮೇಲೆ ಯೋಚನೆ ಮಾಡೋಣ ಎನ್ನುವ ಸೂಕ್ತ ಸಲಹೆಯನ್ನು ನಾವು ಕೊಡುತ್ತಿದ್ದೇವೆ. ಮತ್ತೆ ಯಾವ ನಿಮ್ಮ ಸಾರಿಗೆ ಸಚಿವರು, ಈ ಇಲಾಖೆಯನ್ನು ನಡೆಸುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೋ ಅವರು ರಾಜೀನಾಮೆ ಕೊಟ್ಟ ಮೇಲೆ ಈ ಸದನದ ಸಮಿತಿಯನ್ನು ರಚಿಸಬೇಕು. ಆ ರಾಜೀನಾಮೆ ಕೊಡುವ ಮುಂಚೆ ಅವರ ನೇತೃತ್ವದಲ್ಲಿ ಆ ಸಮಿತಿ ರಚಿಸಿದರೂ ನಾವು ಹೋಗುವುದಿಲ್ಲ, ಮೊದಲು ಅವರ ರಾಜೀನಾಮೆಯನ್ನು ತೆಗೆದುಕೊಳ್ಳಿ, ಸದನದ ಸಮಿತಿಯನ್ನು ರಚಿಸಿ. ಅವರಿಂದ ಸಾಧ್ಯವೇ ಇಲ್ಲ, ಇಲಾಖೆ ಕುಲಗೆಟ್ಟು ಹೋಗಿದೆ ರಿಪೇರಿ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವ ಮಂತ್ರಿಯನ್ನು ಕಟ್ಟಿಕೊಂಡು ನೀವು ಉದ್ಧಾರ ಮಾಡುತ್ತೀರಾ?

(ಈ ಸಂದರ್ಭದಲ್ಲಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸದನದ ಬಾವಿಗೆ ಬಂದು ಧರಣಿ ಕುಳಿತರು)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಗಳು, ಸ್ವಲ್ಪ ಹತ್ತಿರಕ್ಕೆ ಬಂದು ನಾಲ್ಕೈದು ಜನ ಸದಸ್ಯರನ್ನು ಕರೆದು ಮಾತನಾಡುತ್ತೇನೆಂದು ಒಂದು ಸಲಹೆಯನ್ನು ಕೊಟ್ಟರು. ನಾನು ಇನ್ನು ಸ್ವಲ್ಪ ಮುಂದೆ ಹೋಗಿ ನಾನು ಅವರಿಗೆ ಸಲಹೆ ಮಾಡುವುದೇನೆಂದರೆ, ಸದನ ಸಮಿತಿಯನ್ನು ರಚಿಸತಕ್ಕಂಥ